ರೂಪಿಸಲಾಗಿದೆ. ಸದರಿ ನಿಯಮಗಳನ್ನು ಅಂತರ್ ಜಾಲ ತಾಣ: www.uddkar.gov.in ನಲ್ಲಿ ಲಭ್ಯವಿದ್ದು, ವೀಕ್ಷಿಸಬಹುದಾಗಿದೆ. ಆದರೆ ಸದರಿ ನಿಯಮಗಳಿಗೆ ಕರ್ನಾಟಕ ಉಚ್ಚ ನ್ಯಾಯಾಲಯದಿಂದ ತಡೆಯಾಜ್ಞೆ ಜಾರಿಯಲ್ಲಿರುತ್ತದೆ.

ಕುಡಿಯುವ ನೀರಿನ ಯೋಜನೆ

9 (145); ಶ್ರೀ ಅನಿಲ್ ಲಾಡ್ (ಬಳ್ಳಾರಿ ನಗರ)

ಅ) ಬಳ್ಳಾರಿ ನಗರಕ್ಕೆ ಶಾಶ್ವತ ಶುದ್ಧ ಕುಡಿಯುವ ನೀರನ್ನು ಪೂರೈಸಲು ಯಾವುದಾದರೂ ಹೊಸ ಯೋಜನೆಯನ್ನು ಕೈಗೆತ್ತಿಕೊಳ್ಳುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಆ) ಹಾಗಿದ್ದಲ್ಲಿ, ಯಾವ ಹೊಸ ಯೋಜನೆಯನ್ನು ಕೈಗೆತ್ತಿಕೊಳ್ಳಲು ಸರ್ಕಾರ ಚಿಂತನೆ ನಡೆಸಿದೆ;

ಇ) ಈ ಯೋಜನೆಗಾಗಿ ಸರ್ಕಾರ ಅನುದಾನವನ್ನೇನಾದರೂ ನಿಗದಿಪಡಿಸಿ ಬಿಡುಗಡೆ ಮಾಡಿದೆಯೇ? (ವಿವರ ನೀಡುವುದು)

ಶ್ರೀ ವಿನಯಕುಮಾರ್ ಸೊರಕೆ (ಮಾನ್ಯ ನಗರಾಭಿವೃದ್ಧಿ ಸಚಿವರು)

ಅ) ಬಳ್ಳಾರಿ ನಗರಕ್ಕೆ ಶಾಶ್ವತ ಶುದ್ಧ ಕುಡಿಯುವ ನೀರನ್ನು ಪೂರೈಸಲು ಏಶ್ಯನ್ ಅಭಿವೃದ್ಧಿ ಬ್ಯಾಂಕ್ (ಎ.ಡಿ.ಬಿ) ನೆರವಿನ ಉತ್ತರ ಕರ್ನಾಟಕ ನಗರ ವಲಯ ಬಂಡವಾಳ ಹೂಡಿಕಾ ಕಾರ್ಯಕ್ರಮ (ಎನ್.ಕೆ.ಯು.ಎಸ್.ಐ.ಪಿ) ದಡಿ ನಿರಂತರ ಕುಡಿಯುವ ನೀರು ಸರಬರಾಜು ಯೋಜನೆಯನ್ನು ಪೂರೈಸಲು ಈ ಕೆಳಕಂಡ ಯೋಜನೆಗಳನ್ನು ಹಮ್ಮಿಕೊಳ್ಳಲಾಗಿದೆ.

- ಕುಡಿಯುವ ನೀರು ಸುಧಾರಣೆ ಕಾಮಗಾರಿ (3 ಪ್ಯಾಕೇಜು) – ₹. 124.27 ಕೋಟಿಗಳು
- 27X7 ನಿರಂತರ ಕುಡಿಯುವ ನೀರು – ₹. 52.88 ಕೋಟಿಗಳು (ನಿರ್ಮಾಣ ವೆಚ್ಚ)

ಆ)

- ಕುಡಿಯುವ ನೀರು ಸುಧಾರಣೆ 3 ಪ್ಯಾಕೇಜುಗಳ ಶೇ. 80 ರಷ್ಟು ಕಾಮಗಾರಿಯು ಪ್ರಗತಿಯಲ್ಲಿದೆ. (3 ಪ್ಯಾಕೇಜುಗಳು ಶೇ. 80%). ಮೇಲಿನಂತೆ ಯೋಜನೆಯನ್ನು ಅನುಷ್ಠಾನಗೊಳಿಸಲು ಕ್ರಮವಹಿಸಲಾಗಿದೆ.

ಇ)

- ಕುಡಿಯುವ ನೀರು ಸುಧಾರಣೆ ಕಾಮಗಾರಿಗೆ ಡಿಸೆಂಬರ್ 2014 ರ ಅಂತ್ಯದ ವರೆಗೆ ₹. 99.28 ಕೋಟಿ ವೆಚ್ಚವಾಗಿರುತ್ತದೆ.
- ಬಳ್ಳಾರಿ ನಗರಕ್ಕೆ 27X7 ನಿರಂತರ ಕುಡಿಯುವ ನೀರು ಯೋಜನೆಯನ್ನು ₹. 52.88 ಕೋಟಿಗಳ (ನಿರ್ಮಾಣ ವೆಚ್ಚ) ಮೊತ್ತದಲ್ಲಿ ಹಮ್ಮಿಕೊಳ್ಳಲಾಗಿದೆ. ಪ್ರಗತಿ ಆದರಿಸಿ ಅನುದಾನ ಬಿಡುಗಡೆ ಮಾಡಲಾಗುವುದು.

ಭಯೋತ್ಪಾದನೆ ನಿಯಂತ್ರಣ

10 (119); ಶ್ರೀ ಅರವಿಂದ ಲಿಂಬಾವಳಿ (ಮಹದೇವಪುರ)

ಅ) ಉಗ್ರಗಾಮಿಗಳು ಭಯೋತ್ಪಾದನೆ ನಡೆಸಲು ಕರ್ನಾಟಕ ರಾಜ್ಯ, ಅದರಲ್ಲೂ ಮುಖ್ಯವಾಗಿ ಬೆಂಗಳೂರನ್ನು ಗುರಿ ಮಾಡಿಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ.

ಆ) ಹಾಗಿದ್ದಲ್ಲಿ, ಐ.ಟಿ.ಪಿ.ಎಲ್. ಎಲೆಕ್ಟ್ರಾನಿಕ್ ಸಿಟಿ ಸೇರಿದಂತೆ ಇನ್ನಿತರ ಐ.ಟಿ. ಕಾರಿಡಾರ್ ಹಾಗೂ ಸಾರ್ವಜನಿಕ ಸ್ಥಳಗಳಲ್ಲಿ ಇವುಗಳನ್ನು ನಿಯಂತ್ರಿಸಲು ತೆಗೆದುಕೊಂಡಿರುವ ಮುಂಜಾಗ್ರತಾ ಕ್ರಮಗಳೇನು? (ವಿವರ ನೀಡುವುದು)